<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 497 |
| ಮಾನ್ಯ ಸದಸ್ಯರ ಹೆಸರು | : | ಡಾ: ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 20.08.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ವಿದ್ಯಾರಣ್ಯಪುರದ ಇಬ್ಬರು ವಿದ್ಯಾರ್ಥಿನಿಯರ ನಾಪತ್ತೆ, (ಜನವರಿ 31ರಂದು ಮನೆಯಿಂದ ಕಣ್ಮರೆ) ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ; ವಿದ್ಯಾರ್ಥಿನಿಯರು ಕಾಣೆಯಾಗಿ 6 ತಿಂಗಳು ಕಳೆದರೂ ಇನ್ನೂ ಸುಳಿವು ಸಿಗದಿರುವುದಕ್ಕೆ ಕಾರಣಗಳಾದರೂ ಏನು; | ಬೆಂಗಳೂರಿನ ವಿದ್ಯಾರಣ್ಯಪುರದ ಇಬ್ಬರು ವಿದ್ಯಾರ್ಥಿನಿಯರ ನಾಪತ್ತೆ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ:<br><br>1. ಕುಮಾರಿ ತನಿಷ್ಕ 19 ವರ್ಷ ರವರ ಕಾಣೆಯಾದ ಬಗ್ಗೆ:- ವಿದ್ಯಾರಣ್ಯಪುರ ಪೊಲೀಸ್ ಠಾಣೆ ಮೊ.ಸಂ: 47/2026 ಕಲಂ ಮಹಿಳೆ ಕಾಣೆಯಾದ ಬಗ್ಗೆ ದಿನಾಂಕ: 01.02.2026 ರಂದು ಪ್ರಕರಣ ದಾಖಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ: 22.04.2026 ರ ಅನ್ವಯ ಪ್ರಕರಣವನ್ನು ಸಿ.ಐ.ಡಿ. ಘಟಕದ ಮಾನವ ಕಳ್ಳ ಸಾಗಾಣಿಕೆ ಘಟಕಕ್ಕೆ ದಿನಾಂಕ: 28.05.2026 ರಂದು ಮುಂದಿನ ತನಿಖೆಗಾಗಿ ವರ್ಗಾವಣೆ ನೀಡಲಾಗಿರುತ್ತದೆ.<br>2. ಅಪ್ರಾಪ್ತ ಬಾಲಕಿ 17 ವರ್ಷ:- ಯಲಹಂಕ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಮೊ.ಸಂ:-70/2026 ಕಲಂ:-137(2) ಬಿ.ಎನ್.ಎಸ್. ದಿನಾಂಕ: 13.02.2026 ರಂದು ಪ್ರಕರಣ ದಾಖಲಾಗಿದ್ದು, ಪತ್ತೆಕಾರ್ಯ ಕೈಗೊಳ್ಳಲಾಗಿರುತ್ತದೆ.<br><br><u>ಪ್ರಕರಣದ ಹಿನ್ನೆಲೆ:</u><br><br>ಕಾಣೆಯಾದ ಯುವತಿಯರು ಯಲಹಂಕದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಸದರಿ ಕಾಣೆಯಾದವರ ಸ್ನೇಹಿತೆಯಾದ ಯಶಸ್ವಿನಿ ಹಾಗೂ ಇತರೇ ಎಲ್ಲರನ್ನು ವಿಚಾರಿಸಲಾಗಿ, ಯಶಸ್ವಿನಿ ಹಾಗೂ ಅರುಣ್ ರೆಡ್ಡಿ ಎಂಬುವವರು ವಿಚಾರಣೆಯಿಂದ ಕಾಣೆಯಾದ ಯುವತಿಯರು ದಿನಾಂಕ: 31.01.2026 ರಂದು ಕಾಲೇಜ್ ಹತ್ತಿರ ಬಂದಿದ್ದು, ಅವರು ಕಾಲೇಜ್ ಒಳಗಡೆ ಬಾರದೆ, ನಂದಿ ಹಿಲ್ಸ್ ಗೆ ಹೋಗುವುದಾಗಿ ತಿಳಿಸಿ ಯಲಹಂಕದ ರೈಲ್ ನಿಲ್ದಾಣಕ್ಕೆ ಹೋಗಿದ್ದು, ಅಷ್ಟರಲ್ಲಿ ತನಿಷ್ಕಳ ಸ್ನೇಹಿತರಾದ ಹೇಮಂತ್ ಹಾಗೂ ಅಭಿಲಾಷ್ ಇಬ್ಬರೂ ಭೇಟಿಯಾಗಿ, ನಂದಿ ಹಿಲ್ಸ್‌ಗೆ ಹೋಗುವುದು ಬೇಡ ಎಂದು ತಿಳಿಸಿ, ನಾಲ್ಕೂ ಜನರು ಮತ್ತೆ ಎನ್.ಇ.ಎಸ್. ಬಸ್ ನಿಲ್ದಾಣ ದಿಂದ ತನಿಷ್ಕಳ ವಾಸ್ತವ್ಯವಾದ ವಿದ್ಯಾರಣ್ಯಪುರಕ್ಕೆ ಹೋಗಿ ಅಲ್ಲಿಂದ ದುರ್ಗಾ ಪರಮೇಶ್ವರಿ ದೇವಾಲಯಕ್ಕೆ ಹೋಗಿ ಅಲ್ಲಿಂದ ವಿದ್ಯಾರಣ್ಯಪುರ ಬಸ್ ನಿಲ್ದಾಣಕ್ಕೆ ಬಂದು, ಹೇಮಂತ್ ಮತ್ತು ಅಭಿಲಾಷ್ ರವರು ನೀವು ಎಲ್ಲಿಗೂ ಹೋಗುವುದು ಬೇಡ ಮನೆಗೆ ಹೋಗಿ, ನಾವು ಮನೆಗೆ ಹೋಗುತ್ತೇವೆಂದು ತಿಳಿಸಿ ತನಿಷ್ಕಳಿಗೆ ಹೇಮಂತ್ ತನ್ನ ಮೊಬೈಲ್ ನಂಬರ್ ನೀಡಿ ಹೋಗಿರುತ್ತಾರೆ. |

ಆದರೆ, ಕಾಣೆಯಾದ ಇಬ್ಬರೂ ಯುವತಿಯರು ತಮ್ಮ ಮನೆಗಳಿಗೆ ಹೋಗದೆ, ಸಂಜೆ 05-00 ಗಂಟೆಗೆ ತನಿಷ್ಕಳು ಹೇಮಂತ್‌ಗೆ ಕರೆ ಮಾಡಿ ಇಬ್ಬರೂ ಮೈಸೂರಿನ ಕಡೆಗೆ ಹೋಗುತ್ತಿರುವುದಾಗಿ ತಿಳಿಸಿದರು ಎಂದು ಹೇಮಂತನಿಂದ ತಿಳಿದು ಬಂದಿರುವುದಾಗಿ, ತನಿಷ್ಕಾಳ ಗೆಳೆಯ ಅರುಣ್ ರೆಡ್ಡಿ ಎಂಬುವವನು ತಿಳಿಸಿರುತ್ತಾನೆ ಎಂದು ಆಕೆಯ ತಂದೆ ತಿಳಿಸಿರುತ್ತಾರೆ.

ಇಬ್ಬರು ಯುವತಿಯರ ಪತ್ತೆಗಾಗಿ ಕೈಗೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ:

- ದಿನಾಂಕ: 31.01.2026 ರಂದು ಅಪ್ರಾಪ್ತೆಯು ವ್ಯಾಸಂಗ ಮಾಡಿದ ಶಾಲೆಯಿಂದ ಹಾಜರಾತಿಯ ಬಗ್ಗೆ ದಾಖಲಾತಿಗಳನ್ನು ಸಂಗ್ರಹಿಸಲಾಗಿರುತ್ತದೆ ಹಾಗೂ ಆಕೆಯ ಕ್ಲಾಸ್ ಟೀಚರ್, ತಾಯಿ ಶ್ರೀಮತಿ ಲಕ್ಷ್ಮೀ, ತನಿಷ್ಕಾಳ ತಂದೆ ಶ್ರೀ ರವೀಂದ್ರ, ಆಕೆಯ ಸ್ನೇಹಿತ ಹೇಮಂತ ರವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

- ನಂತರ ವಿದ್ಯಾರಣ್ಯಪುರ ಬಸ್ ನಿಲ್ದಾಣದ ಸುತ್ತ ಮುತ್ತಲಿನ ಸಿಸಿಟಿವಿಗಳನ್ನು ಪರಿಶೀಲಿಸಿ ಪಂಚನಾಮೆ ಕ್ರಮ ಜರುಗಿಸಲಾಗಿರುತ್ತದೆ.

- ನಂತರ ಮೇಲ್ಕಂಡ ಪ್ರಕರಣದಲ್ಲಿ ಅಪಹರಣಕ್ಕೊಳಗಾಗಿರುವ ಅಪ್ರಾಪ್ತ ಬಾಲಕಿ ಹಾಗೂ ವಿದ್ಯಾರಣ್ಯಪುರ ಪೊಲೀಸ್ ಠಾಣಾ ಮೊ.ಸಂ.47/2026 ಪ್ರಕರಣದಲ್ಲಿ ಕಾಣೆಯಾಗಿರುವ ಕು. ತನಿಷ್ಕಾ 19 ವರ್ಷ ಇಬ್ಬರೂ ಜೊತೆಯಲ್ಲಿಯೇ ಹೋಗಿರುವುದು ಕಂಡುಬಂದಿದ್ದರಿಂದ ಇವರನ್ನು ಪತ್ತೆ ಮಾಡಲು ಎಸಿಪಿ ಯಲಹಂಕ ಉಪ ವಿಭಾಗ ರವರು ಪತ್ತೆಗಾಗಿ ಎರಡು ಪ್ರತ್ಯೇಕ ತಂಡ ರಚಿಸಿರುತ್ತಾರೆ.

- ನಂತರ ಸದರಿ ಪ್ರಕರಣಗಳಲ್ಲಿ ಜಂಟಿ ತನಿಖೆ ಕೈಗೊಂಡು ತನಿಷ್ಕಾಳ ಸ್ನೇಹಿತ ಅಭಿಲಾಷ್, ಕು.ಯಶಸ್ವಿನಿ, ಹೇಮಂತ್, ಅರುಣ್ ರೆಡ್ಡಿ ರವರ ಹೇಳಿಕೆಗಳನ್ನು ದಾಖಲಿಸಲಾಗಿದೆ.

- ನಂತರ ಕಾಣೆಯಾದ ಇಬ್ಬರೂ ಯುವತಿಯರ ಪೋಷಕರ ಹಾಗೂ ಆಪ್ತ ಸ್ನೇಹಿತರ ಮೊಬೈಲ್ ನಂಬರ್ ಸಿಡಿಆರ್ ಪಡೆದು ಪರಿಶೀಲಿಸಲಾಗಿದೆ.

- ನಂತರ ಸದರಿಯವರ ಪತ್ತೆಗಾಗಿ ಆಧಾರ್ ಕಾರ್ಡ್ ಉಪಯೋಗಿಸಿಕೊಂಡು ಸಿಮ್ ಕಾರ್ಡ್‌ಗಳನ್ನು ಉಪಯೋಗಿಸುತ್ತಿರುವ ಬಗ್ಗೆ ಸರ್ವೀಸ್ ಪ್ರೊವೈಡರ್ ಗಳ ಮಾಹಿತಿ ಪಡೆದು ಪರಿಶೀಲಿಸಿರುತ್ತದೆ.

- ಅಪ್ರಾಪ್ತೆ ಬಾಲಕಿಯನ್ನು ಕು.ತನಿಷ್ಕಾ 19 ವರ್ಷ ಈಕೆಯು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿರುವ ಬಗ್ಗೆ ಪ್ರಿಂಟ್ ಮೀಡಿಯಾ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾ ದಲ್ಲಿ ಪ್ರಚಾರ ಮಾಡಲು ಮಾಧ್ಯ

ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಪೋಷಕರ ಅನುಮತಿ ಪಡೆಯಲಾಗಿ ಪೋಷಕರು ಸದರಿರವರ ಮಗಳನ್ನು ಕು.ತನಿಷ್ಕಾಳ ಕರೆದುಕೊಂಡು ಹೋಗಿದ್ದು ಪ್ರಿಂಟ್ ಮೀಡಿಯಾ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಪ್ರಚಾರ ಪಡಿಸಲು ಅವಶ್ಯಕತೆ ಇಲ್ಲಾ ಎಂದು ಹೇಳಿಕೆ ನೀಡಿರುತ್ತಾರೆ.

- ನಂತರ ಅಪ್ರಾಪ್ತೆ ಬಾಲಕಿಯ ಪತ್ತೆಗಾಗಿ NATGRID ನಲ್ಲಿ ಮಾಹಿತಿ ಕಲೆಹಾಕಲು ಕ್ರಮ ಕೈಗೊಳ್ಳಲಾಗಿರುತ್ತದೆ.

- ಅಪ್ರಾಪ್ತೆ ಬಾಲಕಿಯ ಪತ್ತೆಗಾಗಿ ಶ್ರೀ ಸಿದ್ದರಾಜು ಪಿ.ಎಸ್.ಐ, ಶ್ರೀ ಮಹೇಶ್ ಎ.ಎಸ್.ಐ, ಶ್ರೀ ಚಂದ್ರಶೇಖರಯ್ಯ ಎ.ಎಸ್.ಐ ರವರನ್ನು ಮೈಸೂರು, ಚಾಮರಾಜನಗರ, ಕೊಳ್ಳೇಗಾಲ, ಮಲೈ ಮಹದೇಶ್ವರ ಬೆಟ್ಟ ಕಡೆಗಳಲ್ಲಿ ಪತ್ತೆ ಮಾಡಲು ನಿಯೋಜಿಸಿ ಕಳುಹಿಸಿರುತ್ತದೆ.

- ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಸುತ್ತೋಲೆ ಹೊರಡಿಸಲಾಗಿರುತ್ತದೆ.

- ಯಲಹಂಕ ಉಪನಗರ ಪೊಲೀಸ್ ಠಾಣೆಯ ಮೊ.ಸಂ.70/2026 ರಲ್ಲಿ ಅಪಹರಣಕ್ಕೊಳಗಾಗಿರುವ ಅಪ್ರಾಪ್ತೆ ಬಾಲಕಿಯ ಪ್ರಕರಣದಲ್ಲಿ ಪತ್ತೆಕಾರ್ಯ ಮುಂದುವರೆದಿರುತ್ತದೆ.

- ಮೈಸೂರು ಸುತ್ತ-ಮುತ್ತಲಿನ ಸ್ಥಳಗಳಲ್ಲಿರುವ ಕ್ರಿಶ್ಚಿಯನ್ ಮಿಷನರಿಗಳಿಗೆ ಭೇಟಿ ನೀಡಿ ಕಾಣೆಯಾದ ಯುವತಿಯರ ಬಗೆ, ಮಾಹಿತಿಯನ್ನು ಪಡೆದುಕೊಂಡಿರುತ್ತದೆ.

- ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಮಹಿಳಾ ವಸತಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿರುತ್ತದೆ.

- ಕೊಯಂಬತ್ತೂರು, ಮೆಟ್ಟೂರು, ಕೊಳತ್ತೂರು ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಯು.ಡಿ.ಆರ್ ಪ್ರಕರಣಗಳನ್ನು ಪರಿಶೀಲಿಸಿರುತ್ತದೆ.

- ಕೊಳ್ಳೇಗಾಲ ಉಪವಿಭಾಗದ ಅಧೀನದಲ್ಲಿನ ಪೊಲೀಸ್ ಠಾಣೆಗಳಲ್ಲಿ ನಮೂದಾಗಿರುವ ಯುಡಿಆರ್ ಪ್ರಕರಣಗಳ ಬಗ್ಗೆ ಹಾಗೂ ಸದರಿ ವ್ಯಾಪ್ತಿಯಲ್ಲಿನ ಮಹಿಳಾ ವಸತಿ ನಿಲಯಗಳು, ಆಶ್ರಮಗಳು, ಕ್ರಿಶ್ಚಿಯನ್ ಮಿಷನರಿಗಳಲ್ಲಿ ಕಾಣೆಯಾಗಿರುವ ಯುವತಿಯರ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತದೆ ಹಾಗೂ ನಕ್ಸಲ್ ಚಟುವಟಿಕೆಗಳ ಸಕ್ರಿಯತೆಯ ಬಗ್ಗೆ ಮಾಹಿತಿಯುನ್ನು ಪಡೆದು ಕೊಂಡಿರುತ್ತದೆ.

- ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ, ರಾಮನಗರ, ಚನ್ನಪಟ್ಟಣ,

| | | |
|---|---|---|
| | | ಕೊಳ್ಳೇಗಾಲ, ಟಿ.ನರಸೀಪುರ, ಮೈಸೂರು ಬಸ್ ಡಿಪೋಗಳಿಗೆ ಭೇಟಿ ನೀಡಿದ್ದು ಕಾಣೆಯಾದ ಯುವತಿಯರ ಬಗ್ಗೆ ಮಾಹಿತಿ ತಿಳಿಸಿ. ಪೊಲೀಸ್ ಪ್ರಕಟಣೆಯನ್ನು ಡಿಪೋ ಮ್ಯಾನೇಜರ್ ಮತ್ತು ಬಸ್ ಚಾಲಕ, ನಿರ್ವಾಹಕರುಗಳಿಗೆ ನೀಡಿರುತ್ತದೆ.<br><br>• ಪೊಲೀಸ್ ಐಟಿ ತಂತ್ರಾಂಶದಲ್ಲಿ ನಮೂದಾಗಿರುವ 1 5 ರಿಂದ 25 ವರ್ಷದ ಅಪರಿಚಿತ ಹೆಣ್ಣುಮಕ್ಕಳ ಯು.ಡಿ. ಆರ್ ಪ್ರಕರಣಗಳ ಮಾಹಿತಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತದೆ.<br><br>• ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿನ ನಕ್ಸಲ್ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಕಲೆಹಾಕಲು ಹಾಗೂ ಸದರಿ ರಾಜ್ಯಗಳಲ್ಲಿನ ಯು.ಡಿ.ಆರ್‌ಗಳ ಮಾಹಿತಿ ಪಡೆಯಲು ಈಗಾಗಲೇ ಒಂದು ತಂಡ ಭೇಟಿ ನೀಡಲು ತೆರಳಿರುತ್ತದೆ.<br><br>• ಕರ್ನಾಟಕ ಹಾಗೂ ಎಲ್ಲಾ ರಾಜ್ಯಗಳಲ್ಲಿರುವ ಎಸ್.ಪಿ.ಓ, ಎಹೆಚ್‌ಟಿಯು ವಿಭಾಗ ಹಾಗೂ ಪೊಲೀಸ್ ಠಾಣೆಗಳಲ್ಲಿ ಕಾಣೆಯಾದವರ ಪತ್ತೆ ಬಗ್ಗೆ ಸಹಕರಿಸಲು ಪೊಲೀಸ್ ಪ್ರಕಟಣೆಯ ಪ್ರತಿಯನ್ನು ನೀಡಿರುತ್ತದೆ.<br><br>• ಕರ್ನಾಟಕದ ವೃತ್ತ ಪತ್ರಿಕೆಗಳಲ್ಲಿ ಕಾಣೆಯಾದವರ ಬಗ್ಗೆ ಮಾಹಿತಿಯನ್ನು ಪ್ರಕಟಿಸಿರುತ್ತದೆ ಹಾಗೂ ತಮಿಳುನಾಡು ಮತ್ತು ಕೇರಳ ರಾಜ್ಯದ ವೃತ್ತಪತ್ರಿಕೆಗಳಲ್ಲಿ ಕಾಣೆಯಾದವರ ಬಗ್ಗೆ ಪೊಲೀಸ್ ಪ್ರಕಟಣೆ ಪ್ರಕಟಿಸಲು ಕ್ರಮಕೈಗೊಂಡಿರುತ್ತದೆ. |
| ಆ) | ರಾಜ್ಯದಲ್ಲಿ ಇತ್ತೀಚೆಗೆ ಯುವತಿಯರು ಹಾಗೂ ವಿದ್ಯಾರ್ಥಿನಿಯರು ಕಾಣೆಯಾಗುವವರ ಸಂಖ್ಯೆ ಹೆಚ್ಚುತ್ತಿದ್ದು; ಇದಕ್ಕೆ ನಿಖರ ಕಾರಣಗಳೇನು; ಈವರೆಗೂ ಎಷ್ಟು ನಾಪತ್ತೆಯಾದ ಯುವತಿಯರು ಮತ್ತು ವಿದ್ಯಾರ್ಥಿನಿಯರನ್ನು ಪತ್ತೆ ಹಚ್ಚಲಾಗಿದೆ; | ರಾಜ್ಯದಲ್ಲಿ ಇತ್ತೀಚೆಗೆ ಯುವತಿಯರು ಹಾಗೂ ವಿದ್ಯಾರ್ಥಿನಿಯರು ಕಾಣೆಯಾಗುವ ಪ್ರಮುಖ ಕಾರಣಗಳು ಈ ಕೆಳಗಿನಂತಿದೆ:<br><br>• ಅನೇಕ ಸಂದರ್ಭಗಳಲ್ಲಿ ಪ್ರೀತಿ-ಪ್ರೇಮ ಮತ್ತು ಇಷ್ಟದ ಜೀವನಕ್ಕೆ ಯುವತಿಯರು ಮನೆಯವರ ವಿರೋಧ ಅಥವಾ ಸಾಮಾಜಿಕ ಕಟ್ಟುಪಾಡುಗಳಿಗೆ ಹೆದರಿ, ತಮಗಿಷ್ಟವಾದ ವ್ಯಕ್ತಿಯೊಂದಿಗೆ ಮನೆ ತೊರೆಯುತ್ತಾರೆ.<br><br>• ಸಾಮಾಜಿಕ ಜಾಲತಾಣಗಳ ಪ್ರಭಾವ/ ಅತಿಯಾದ ಬಳಕೆ ಮತ್ತು ಸೈಬರ್ ಮೋಸ.<br><br>• ಗ್ರಾಮೀಣ ಮತ್ತು ಬಡ ಕುಟುಂಬಗಳ ಯುವತಿಯರನ್ನು ಉದ್ಯೋಗ, ಮಾಡೆಲಿಂಗ್ ಅಥವಾ ಉತ್ತಮ ಜೀವನಶೈಲಿಯ ಆಮಿಷ ಒಡ್ಡುವುದು. |

- ಪರೀಕ್ಷೆಗಳ ಫಲಿತಾಂಶ, ಶೈಕ್ಷಣಿಕ ಒತ್ತಡ, ಪೋಷಕರ ಕಟ್ಟುನಿಟ್ಟಿನ ನಿಯಮಗಳು ಅಥವಾ ಪೋಷಕರ ಬೈಗುಳಕ್ಕೆ, ನಿಂದನೆಗೆ ಹೆದರಿ ಕೆಲ ವಿದ್ಯಾರ್ಥಿನಿಯರು ಹಠಾತ್ತಾಗಿ ಮನೆ ತೊರೆಯುತ್ತಾರೆ.

- ರಾಜ್ಯದಲ್ಲಿ ಕಳೆದ 2024, 2025 ಮತ್ತು 2026(ಜುಲೈ) ವರೆಗೆ ಕಾಣೆಯಾದ/ಅಪಹರಣವಾದ ಯುವತಿಯರು ಹಾಗೂ ಅಪ್ರಾಪ್ತರು (ವಿದ್ಯಾರ್ಥಿನಿಯರು ಸೇರಿದಂತೆ ) ವಿವರಗಳು ಈ ಕೆಳಕಂಡಂತಿದೆ:

| ವರ್ಷ | ಅಪ್ರಾಪ್ತರು (18 ವರ್ಷದ ಒಳಗಿನವರು) | | |
|---|---|---|---|
| | ವರದಿ | ಪತ್ತೆ | ನಾಪತ್ತೆ |
| **2024** | 2500 | 2433 | 67 |
| **2025** | 2645 | 2505 | 140 |
| **2026** | 1731 | 900 | 831 |

| ವರ್ಷ | ಮಹಿಳೆಯರು (18 ವರ್ಷ ಮತ್ತು ಮೇಲ್ಪಟ್ಟವರು) | | |
|---|---|---|---|
| | ವರದಿ | ಪತ್ತೆ | ನಾಪತ್ತೆ |
| **2024** | 14413 | 14096 | 317 |
| **2025** | 15159 | 14763 | 396 |
| **2026** | 9909 | 8150 | 1759 |

ಇ) ರಾಜ್ಯದಲ್ಲಿ ಹೆಣ್ಣು ಮಕ್ಕಳ ಮಾರಾಟ ಜಾಲ ಏನಾದರೂ ಇರುತ್ತದೆ; ಇದ್ದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗಿರುವ ಪ್ರಕರಣಗಳೆಷ್ಟು; ಅತಿಹೆಚ್ಚು ಪ್ರಕರಣಗಳು ಎಲ್ಲಿಂದ ವರದಿಯಾಗಿವೆ; ಇದನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ರಾಜ್ಯದಲ್ಲಿ ಹೆಣ್ಣು ಮಕ್ಕಳ ಮಾರಾಟ ಜಾಲಗಳು ಇರುವುದಿಲ್ಲ. ಮಕ್ಕಳ ಮಾರಾಟ ಸಂಬಂಧಪಟ್ಟಂತೆ 2024 ರಿಂದ 2026 (ಜುಲೈ) ವರೆಗೆ 08 ಪ್ರಕರಣಗಳು ವರದಿಯಾಗಿದ್ದು, ಸದರಿ ಪ್ರಕರಣಗಳಲ್ಲಿ ಒಟ್ಟು 35 ಆರೋಪಿತರನ್ನು ಬಂಧಿಸಲಾಗಿದ್ದು, ಅವರಿಂದ ಒಟ್ಟು 08 ಮಕ್ಕಳನ್ನು ರಕ್ಷಿಸಲಾಗಿದೆ. ವರ್ಷವಾರು ಮಾಹಿತಿಯನ್ನು ಅನುಬಂಧ-ಎ ರಲ್ಲಿ ಒದಗಿಸಲಾಗಿದೆ.

ಕಾಣೆಯಾದ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಪತ್ತೆಯಾಗದ ಪ್ರಕರಣಗಳನ್ನು ಪತ್ತೆ ಹಚ್ಚಲು ಕೈಗೊಂಡಿರುವ ಕ್ರಮಗಳು.

- ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಆದೇಶದಂತೆ ನಾಪತ್ತೆ ಪ್ರಕರಣಗಳನ್ನು ದಾಖಲಿಸಿದ ನಂತರ ತನಿಖಾಧಿಕಾರಿಗಳು ಪತ್ತೆ ಹಚ್ಚಲು ಕೈಗೊಳ್ಳಬೇಕಾದ / ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಥಾಯಿ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ.

- ಮಕ್ಕಳ ಅಪಹರಣ ಮತ್ತು ಕಾಣೆ ಪ್ರಕರಣಗಳ ತನಿಖೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ ತನಿಖೆಯನ್ನು ನಿರ್ವಹಿಸುತ್ತಿದ್ದು, ಈ ಆದೇಶಗಳನ್ವಯ ಅಪಹರಣ ಮತ್ತು ಕಾಣೆ ಪ್ರಕರಣಗಳಲ್ಲಿ ತನಿಖೆ ನಿರ್ವಹಿಸಲು ಸೂಕ್ತ ಸೂಚನೆಗಳನ್ನು ಘಟಕಾಧಿಕಾರಿಗಳಿಗೆ ನೀಡಲಾಗಿರುತ್ತದೆ.

- ಕಾಣೆ/ಅಪಹರಣ ಪ್ರಕರಣ ವರದಿಯಾದ ಕೂಡಲೇ ರಾಜ್ಯದ ಎಲ್ಲಾ ಠಾಣೆಗಳಿಗೆ ಪ್ರಕರಣದ ಆರೋಪಿ ಮತ್ತು ಅಪಹರಿಸಿರುವ ಮಗುವಿನ ಬಗ್ಗೆ ಯಾವುದೇ ಸುಳಿವು ದೊರೆಯದೆ ಇದ್ದಲ್ಲಿ ಪೋಷಕರ ಒಪ್ಪಿಗೆ

ಮೇರೆಗೆ ಪತ್ರಿಕಾ ಪ್ರಕಟಣೆ, ದೂರದರ್ಶನ, ಆಕಾಶವಾಣಿ ಇತ್ಯಾದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ರಾಜ್ಯದ ಗಡಿಪ್ರದೇಶಗಳಲ್ಲಿ ಮತ್ತು ಬಸ್ ನಿಲ್ದಾಣ/ರೈಲ್ವೆ ನಿಲ್ದಾಣಗಳಲ್ಲಿ ಭಿತ್ತಿಪತ್ರಗಳನ್ನು/ಫೋಟೋಗಳನ್ನು ಅಂಟಿಸಿ ಪತ್ತೆ ಕ್ರಮ ಕೈಗೊಳ್ಳಲಾಗುತ್ತಿದೆ.

- ರೀಜನಲ್ ಪಾಸ್‌ಪೋರ್ಟ್ ಆಫೀಸ್ ರವರಿಗೆ ಯಾರಾದರೂ ನವಜಾತ ಮಕ್ಕಳಿಗೆ ಪಾಸ್ ಪೋರ್ಟ್ ಅರ್ಜಿ ಸಲ್ಲಿಸಿರುವರೇ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.

- ಲುಕ್‌ಔಟ್ ನೋಟೀಸ್ ನೀಡುವುದು, ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಹುಡುಕಾಟ ನಡೆಸುವುದು.

- ಅಧಿಕಾರಿಗಳ ತಂಡವನ್ನು ನಿರ್ಮಿಸಿ ಎಲ್ಲಾ ಕಡೆ ಹುಡುಕಾಟ ನಡೆಸುವುದು, ಅಕ್ಕ-ಪಕ್ಕದ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸುವುದು.

- ಮಕ್ಕಳ ಕಳ್ಳ ಸಾಗಾಣಿಕೆಯಾಗಿರುವ ಸಾಧ್ಯತೆ ಇದ್ದಲ್ಲಿ ಕಳ್ಳ ಸಾಗಾಣಿಕೆ ಮಾಡುವವರ ಬಗ್ಗೆ ಬಾತ್ಮಿದಾರರಿಂದ ಮಾಹಿತಿ ಸಂಗ್ರಹಿಸಿ ಕಳ್ಳ ಸಾಗಾಣಿಕೆದಾರರ ವಿರುದ್ಧ ಕಲಂ: 370, 370[ಎ] ಐಪಿಸಿ ಮತ್ತು ಇಮ್ಮಾರಲ್ ಟ್ರಾಫಿಕಿಂಗ್ ಪ್ರಿವೆನ್ಸ್ ಆಕ್ಟ್ (ಐ.ಟಿ.ಪಿ.ಎ)ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

- ಮಾನವ ಕಳ್ಳ ಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿರ್ದಿಷ್ಟ ಕಾರ್ಯ ವಿಧಾನವನ್ನು ಸಿದ್ಧಪಡಿಸಿ, ಸ್ಥಾಯಿ ಆದೇಶದ ಮೂಲಕ ರಾಜ್ಯ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.

- ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಭಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡುಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ.

- ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾನ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿ ಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ.

- ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಸುತ್ತಾ ಮುತ್ತಾ ಲಭ್ಯವಿದ್ದ ಸಿಸಿಟಿವಿ ಕ್ಯಾಮರಾದ ಫುಟೇಜ್‌ಗಳನ್ನು ಪರಿಶೀಲನೆ ಮಾಡಲಾಗುತ್ತಿದೆ.

| | | |
|---|---|---|
| | | • ಲಭ್ಯವಿರುವ ಮಾಹಿತಿಯೊಂದಿಗೆ (ಚಹರೆ) ಟ್ರಾಕ್ ಚೈಲ್ಡ್ ತಂತ್ರಾಂಶದಲ್ಲಿ ಮಗುವಿನ ದೈಹಿಕ ಚಹರೆಯನ್ನು ಮಿಸ್ಸಿಂಗ್ ಪರ್ಸನ್ ಬ್ಯೂರೋಗೆ ಕಳುಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ಮಾನವ ಕಳ್ಳಸಾಗಾಣಿಕೆ ಪ್ರಕರಣಗಳನ್ನು ತಡೆಗಟ್ಟಲು ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕ ಹಾಗೂ ಸಂಬಂಧಪಟ್ಟ ಎಸ್‌ಸಿಆರ್‌ಬಿ (ರಾಜ್ಯ ಅಪರಾಧ ದಾಖಲಾತಿ ಘಟಕ) ಮತ್ತು ಎನ್‌ಸಿಆರ್‌ಬಿ (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾನವ ಕಳ್ಳಸಾಗಾಣಿಕೆ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.<br><br>• ಮಿಷನ್ ವಾತ್ಸಲ್ಯ ಪೋರ್ಟಲ್, KSP ವೆಬ್ ಸೈಟ್, Cri-MAC ಪೋರ್ಟಲ್ ಮುಂತಾದ ತಾಂತ್ರಿಕ ವಿಧಾನಗಳನ್ನು ಮಕ್ಕಳ ಅಪರಾಧ ಪತ್ತೆ ಮತ್ತು ತಡೆಗಟ್ಟುವಲ್ಲಿ ಬಳಸಿ ಕೊಳ್ಳಲಾಗುತ್ತಿದೆ.<br><br>• ಅಪಹರಣಕ್ಕೊಳಗಾದ ಮಗುವಿನ ಭಾವ ಚಿತ್ರಗಳ ನೋಟೀಸುಗಳನ್ನು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಅಂಟಿಸುವ ಮೂಲಕ, ಸಾಮಾಜಿಕ ಜಾಲತಾಣಗಳಲ್ಲಿ, ಎಲ್ಲಾ ವರ್ಗದ ಜನತೆಯನ್ನೂ ತಲುಪುವಂತೆ ವ್ಯಾಪಕ ಪ್ರಚಾರ ನೀಡಿ ಸಾರ್ವಜನಿಕರ ಸಹಕಾರದಿಂದ ಈ ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುತ್ತದೆ.<br><br>• ರಾಜ್ಯದಲ್ಲಿ ಮಾನವ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ರಾಜ್ಯದಲ್ಲಿ ಎಹೆಚ್‌ಟಿಯು (Anti Human Trafficking Unit) ಗಳನ್ನು ಸ್ಥಾಪಿಸಲಾಗಿದೆ.<br><br>• ಕಾಣೆಯಾದ ಪ್ರಕರಣಗಳ ಪೈಕಿ 6 0 ದಿನದೊಳಗೆ ಪತ್ತೆಯಾಗದ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ ಎಹೆಚ್‌ಟಿಯು (Anti Human Trafficking Unit) ಘಟಕಗಳಿಗೆ ವರ್ಗಾವಣೆ ಮಾಡುವುದು.<br><br>• ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆ ಬಗ್ಗೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ |

ಸಂಖ್ಯೆ: ಹೆಚ್‌ಡಿ 70 ಪಿಸಿಬಿ 2026

(ಪ್ರಿಯಾಂಕ್ ಮೇರಿ)
ಗೃಹ ಸಚಿವರು

# ಅನುಬಂಧ-ಎ

| ಘಟಕ | ವರ್ಷ | ಹೆಣ್ಣು ಮಕ್ಕಳ ಮಾರಾಟ ಜಾಲಕ್ಕೆ ಸಂಬಂಧಪಟ್ಟಂತೆ ದಾಖಲಾದ ಪ್ರಕರಣಗಳ ಸಂಖ್ಯೆ | ಮಾರಾಟ ಜಾಲಕ್ಕೆ ಒಳಪಟ್ಟ ಹೆಣ್ಣು ಮಕ್ಕಳ ಸಂಖ್ಯೆ | ಮಾರಾಟ ಜಾಲದಿಂದ ರಕ್ಷಿಸಲ್ಪಟ್ಟ ಹೆಣ್ಣು ಮಕ್ಕಳ ಸಂಖ್ಯೆ | ಮಾರಾಟ ಜಾಲಗಳ ಸಂಖ್ಯೆ | ಬಂಧಿಸಿದ ಆರೋಪಿಗಳ ಸಂಖ್ಯೆ | ಶಿಕ್ಷೆಯಾದ ಪ್ರಕರಗಳ ಸಂಖ್ಯೆ | ಶಿಕ್ಷೆಯಾದ ಆರೋಪಿಗಳ ಸಂಖ್ಯೆ |
|---|---|---|---|---|---|---|---|---|
| ಬೆಳಗಾವಿ ನಗರ | 2024 | 1 | 1 | 1 | 0 | 7 | 0 | 0 |
| | 2025 | 1 | 1 | 1 | 0 | 0 | 0 | 0 |
| | 2026 | 1 | 1 | 1 | 0 | 2 | 0 | 0 |
| ಬೆಂಗಳೂರು ಜಿಲ್ಲೆ | 2024 | 1 | 1 | 1 | 1 | 5 | 0 | 0 |
| ಚಾಮರಾಜನಗರ ಜಿಲ್ಲೆ | 2025 | 1 | 1 | 1 | 1 | 5 | 0 | 0 |
| ಹಾಸನ ಜಿಲ್ಲೆ | 2025 | 1 | 1 | 1 | 1 | 7 | 0 | 0 |
| ಕೋಲಾರ ಜಿಲ್ಲೆ | 2025 | 1 | 1 | 1 | 1 | 2 | 0 | 0 |
| ಸಿ.ಐ.ಡಿ. ಘಟಕ | 2025 | 1 | 1 | 1 | 1 | 7 | 0 | 0 |